## ಅಪೀಲು ಸ್ಥಾಯಿ ಸಮಿತಿ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:12-06-2015ರ ನಡವಳಿಗಳು

**ವಿಷಯದ ಸಂಖ್ಯೆ: ಅಸ್ಥಾಸ/(ತೆ)/79/2014-15**

**ನಡುವೆ:**

**ವಾದಿ (Appellant)**

ಅಧ್ಯಕ್ಷರು,
ಶ್ರೀ ಶ್ರೀನಿವಾಸ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್,
ಚಿಕ್ಕಸಂದ್ರ, ಸರ್ವೆ ನಂ.15,
ಹೆಸರಘಟ್ಟ ಮುಖ್ಯರಸ್ತೆ, ಚಿಕ್ಕಸಂದ್ರ,
ಬೆಂಗಳೂರು-57

**ಪ್ರತಿವಾದಿ (Respondent)**

ಸಹಾಯಕ ಕಂದಾಯ ಅಧಿಕಾರಿ (ಶೆಟ್ಟಿಹಳ್ಳಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಶ್ರೀ ಶ್ರೀನಿವಾಸ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ ರವರು ಸಹಾಯಕ ಕಂದಾಯ ಅಧಿಕಾರಿ (ಶೆಟ್ಟಿಹಳ್ಳಿ ವಲಯ) ರವರು ದಿನಾಂಕ:22-12-2014 ರಂದು ಹೊರಡಿಸಿರುವ ತಿಳುವಳಿಕೆ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

## ಆದೇಶ

ಪ್ರಕರಣ ಕರೆಯಲಾಯಿತು. ಉಭಯತರರು ಹಾಜರ್.

ಮೇಲ್ಮನವಿದಾರರ ವಕೀಲರು ಶ್ರೀಕಾಂತ್‌ರವರು ಹಾಜರಾಗಿ ವಕಾಲತ್ ಸಲ್ಲಿಸಲು ಸಮಯ ಕೋರಿದರು.

ಆದರೆ, ಈ ಪ್ರಕರಣದಲ್ಲಿ ದಿನಾಂಕ:13-01-2015ರ ಮೇಲ್ಮನವಿಯು ARO ರವರ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಲಾಗಿದೆ. ಆದರೆ, ARO ರವರ ತಿಳುವಳಿಕೆ ಪತ್ರ ವಿರುದ್ಧ ಸಂಬಂಧಿಸಿದ ಜಂಟಿ ಆಯುಕ್ತರ ಮುಂದೆ ಅರ್ಜಿ ಸಲ್ಲಿಸುವುದು ಸೂಕ್ತವಾದ ವಿಧಾನ.

ಈ ಹಂತದಲ್ಲಿ ಸ್ಥಾಯಿ ಸಮಿತಿ ಮುಂದೆ ಮೇಲ್ಮನವಿ ಸಲ್ಲಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ, ಸದರಿ ಅರ್ಜಿಯನ್ನು Not maintainable ಎಂದು ತೀರ್ಮಾನಿಸಿ ತಿರಸ್ಕರಿಸಲು ಆದೇಶಿಸಿದೆ.

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

## ಅಪೀಲು ಸ್ಥಾಯಿ ಸಮಿತಿ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:12-06-2015ರ ನಡವಳಿಗಳು

**ವಿಷಯದ ಸಂಖ್ಯೆ: ಅಸ್ಥಾಸ/(ಆ)/02/2015-16**

**ನಡುವೆ:**

**ವಾದಿ (Appellant)**

ಶ್ರೀ.ಡಿ.ಆರ್.ವಿಜಯಸಾರಥಿ,
ಶಾಂತಿಸಾಗರ್ ಫಾಸ್ಟ್ ಫುಡ್,
ಆಲದ ಮರದ ಬಸ್ ನಿಲ್ದಾಣ ಎದುರು,
ಹಂಪಿನಗರ, ವಿಜಯನಗರ,
ಬೆಂಗಳೂರು-40

**ಪ್ರತಿವಾದಿ (Respondent)**

ಆರೋಗ್ಯ ವೈದ್ಯಾಧಿಕಾರಿ (ವಿಜಯನಗರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಡಿ.ಆರ್.ವಿಜಯಸಾರಥಿ, ಶಾಂತಿಸಾಗರ್ ಫಾಸ್ಟ್ ಫುಡ್, ಆಲದ ಮರದ ಬಸ್ ನಿಲ್ದಾಣ ಎದುರು, ಹಂಪಿನಗರ, ವಿಜಯನಗರ, ಬೆಂಗಳೂರು-40 ಇಲ್ಲಿನ 2ನೇ ಮಹಡಿಯಲ್ಲಿ ಪಾರ್ಟಿ ಹಾಲ್ ನಡೆಸಲು ಪರವಾನಗಿ ಕೋರಿದ್ದು, ಸದರಿಯವರ ಮನವಿಯನ್ನು ಆರೋಗ್ಯ ವೈದ್ಯಾಧಿಕಾರಿ (ವಿಜಯನಗರ) ರವರು ದಿನಾಂಕ:05-07-2014 ರಂದು ತಿರಸ್ಕರಿಸಿದ್ದು, ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

## ಆದೇಶ

ಪ್ರಕರಣವನ್ನು ಕರೆಯಲಾಯಿತು. ಉಭಯತರರು ಹಾಜರ್.

ಪ್ರತಿವಾದಿಗಳು ಸದರಿ ಪಾರ್ಟಿಹಾಲ್‌ನ ವಿಸ್ತೀರ್ಣ ತೋರಿಸುವ ಕ್ರಯಪತ್ರದ ಪ್ರತಿ ಹಾಜರ್‌ಪಡಿಸಿದರು.

ಇದರಂತೆ, 2ನೇ ಮಹಡಿಯಲ್ಲಿನ ಪಾರ್ಟಿಹಾಲ್‌ನ ವಿಸ್ತೀರ್ಣ 750 ಚ.ಅಡಿ (ಸುಮಾರು 70 ಚ.ಮಿ.).

ಪ್ರತಿವಾದಿಗಳು ಸದರಿ ಪಾರ್ಟಿಹಾಲ್‌ನ ಗ್ರಾಹಕರು ಹೆಚ್ಚಿಗೆ ಸಣ್ಣ ನೌಕರದಾರರಾಗಿದ್ದು, ಹೆಚ್ಚಿಗೆ ದ್ವಿಚಕ್ರವಾಹನಗಳು, ಬಸ್‌ಗಳು ಬಳಸುವುದಾಗಿ ತಿಳಿಸಿದರು. ಅಕ್ಕಪಕ್ಕದವರ ಆಕ್ಷೇಪಣೆ ಇಲ್ಲವೆಂದು ತಿಳಿಸಿದ್ದಾರೆ. ಈಗಾಗಲೇ ಸದರಿ ಕಟ್ಟಡದಲ್ಲಿ ಹೋಟೆಲ್ ನಡೆಸುತ್ತಿದ್ದಾರೆ. ಆದ್ದರಿಂದ ಸಣ್ಣ ವಿಸ್ತೀರ್ಣದ ಪಾರ್ಟಿಹಾಲ್‌ಗೆ ಪರವಾನಿಗೆ ನೀಡುವುದು ಸೂಕ್ತವಾಗಿದೆ. ಈ ಕಾರಣದಿಂದ ಮೇಲ್ಮನವಿ ಪುರಸ್ಕರಿಸಿದೆ. ಉದ್ದಿಮೆ ಪರವಾನಿಗೆ ನೀಡಲು ಸೂಚಿಸಿದೆ.

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು